ಅವರು ಕೂಡ 'ನಾಯಕಿಯರಿಲ್ಲ ಎನ್ನುವುದು, ಕನ್ನಡದಲ್ಲಿ ಕಥೆಗಳಿಲ್ಲ ಎನ್ನುವಂತಹ ಮತ್ತೊಂದು ಕ್ಲೀಷೆ' ಎನ್ನುತ್ತಾರೆ.

'ನಾಯಕಿಯರಿಲ್ಲ ಎನ್ನುವವರು ಯಾರು? ಸಾಮಾನ್ಯವಾಗಿ ಅದು ನಿರ್ಮಾಪಕರ ಹಾಗೂ ನಾಯಕನಟರ ಕಂಪ್ಲೇಂಟ್. ಅವರಿಗೆ ಹೊಸ ಪ್ರತಿಭೆಗಳನ್ನು ಹುಡುಕುವ ವ್ಯವಧಾನ ಕಡಿಮೆ. ನಮ್ಮ ಹೀರೊಗಳ ಸಿನಿಮಾಗಳಿಗೆ ಫರ್ಫಾರ್ಮ್ ಮಾಡುವ ನಟಿಯರು ಬೇಕಿಲ್ಲ. ಅವರಿಗೆ ಅಂದವಷ್ಟೇ ಸಾಕು. ಹಾಗಾಗಿ ಆಮದು ಚೆಲುವೆಯರ ಬಗ್ಗೆ ಅವರು ಹೆಚ್ಚು ಯೋಚಿಸುತ್ತಾರೆ' ಎನ್ನುವ ಜಯತೀರ್ಥ, 'ಈ ನೆಲದ ನೋವು–ಸ್ಪಂದನಗಳನ್ನು ಅರ್ಥ ಮಾಡಿಕೊಳ್ಳುವ ಹೆಣ್ಣುಮಕ್ಕಳಿಂದಷ್ಟೇ ಇಲ್ಲಿನ ಕಥನಗಳಿಗೆ ಜೀವತುಂಬುವುದು ಸಾಧ್ಯ. ಬೇರೆ ಭಾಷೆಯಿಂದ ನಾಯಕಿಯರನ್ನು ಕರೆತರುವುದು ದೊಡ್ಡಸ್ತಿಕೆ, ಪ್ರತಿಷ್ಠೆಯೂ ಆಗಿದೆ. ನಾಯಕಿಯರ ವಿಷಯವಿರಲಿ – ಅಮ್ಮ, ಅತ್ತೆಯರ ಪಾತ್ರಕ್ಕೂ ರಮ್ಯಾಕೃಷ್ಣ ಅವರಂಥ ಆಮದು ನಟಿಯರೇ ಬೇಕು' ಎನ್ನುತ್ತಾರೆ.

'ನಮ್ಮಲ್ಲಿ ಸೂಕ್ಷ್ಮಮನಸ್ಸಿನ ಕಲಾವಿದೆಯರು ಇದ್ದಾರೆ. ಅವರು ಸೃಜನಶೀಲ ಪಾತ್ರಗಳನ್ನೇ ಅಪೇಕ್ಷಿಸುತ್ತಾರೆ. ರಂಗಭೂಮಿಯಲ್ಲೂ ಪ್ರತಿಭಾವಂತೆಯರ ಸಂಖ್ಯೆ ಸಾಕಷ್ಟಿದೆ. 'ಬ್ಯೂಟಿಫುಲ್ ಮನಸುಗಳು' ಚಿತ್ರದ ಪುಟ್ಟ ಪಾತ್ರವೊಂದರಲ್ಲಿ ನಟಿಸಿದ್ದ ಸ್ವಾತಿ ಕೊಂಡೆ ಈಗ 'ವೆನಿಲ್ಲಾ' ಚಿತ್ರದ ನಾಯಕಿ. ತುಮಕೂರಿನ ಈ ಹುಡುಗಿಗೆ ಒಳ್ಳೆಯ ಕಲಾವಿದೆಯಾಗುವ ಎಲ್ಲ ಲಕ್ಷಣಗಳೂ ಇವೆ. ಹರಿಪ್ರಿಯಾ ಕೂಡ ಹೊಸ ಪ್ರಯೋಗಗಳಿಗೆ ಒಡ್ಡಿಕೊಳ್ಳುತ್ತಿರುವ ನಟಿ' ಎನ್ನುವ ಜಯತೀರ್ಥ, ಪ್ರತಿಭೆಗಳನ್ನು ಗುರ್ತಿಸುವ ಮನಸ್ಥಿತಿಯ ಅಗತ್ಯವನ್ನು ಸೂಚಿಸುತ್ತಾರೆ.

ನಿರ್ದೇಶಕಿ ಸುಮನ್ ಕಿತ್ತೂರು, 'ನಾಯಕಿಯರು ಇಲ್ಲ ಎನ್ನುವುದು ತಪ್ಪು' ಎಂದು ಕೊಂಚ ಖಾರವಾಗಿಯೇ ಪ್ರತಿಕ್ರಿಯಿಸುತ್ತಾರೆ. ಇರುವವರನ್ನು ಗುರ್ತಿಸುತ್ತಿಲ್ಲ, ಹೊಸಬರನ್ನು ಹುಟ್ಟುಹಾಕುವ ಮನಸ್ಥಿತಿಯೂ ನಮ್ಮಲ್ಲಿ ಕಡಿಮೆ' ಎಂದು ಚಿತ್ರರಂಗದ ತಮ್ಮ ಅನುಭವದ ಹಿನ್ನೆಲೆಯಲ್ಲಿ ಹೇಳುತ್ತಾರೆ.

'ಹೆಣ್ಣುಮಕ್ಕಳು ಚಿತ್ರರಂಗದಲ್ಲಿ ಹೆಚ್ಚು ತೊಡಗಿಸಿಕೊಳ್ಳಬೇಕು ಎಂದು ಹೇಳುತ್ತಾರೆ. ಈ ಪ್ರೋತ್ಸಾಹ ಮಾತಿಗಷ್ಟೇ ಸೀಮಿತ. ಹೆಣ್ಣುಮಕ್ಕಳು ಸಿನಿಮಾ ಮಾಡಿದಾಗ ಪ್ರೋತ್ಸಾಹ ದೊರೆಯುವುದಿಲ್ಲ. ನನ್ನ ಎಲ್ಲ ಸಿನಿಮಾಗಳಿಗೂ ಥಿಯೇಟರ್ ಸಮಸ್ಯೆ ಅನುಭವಿಸಿದ್ದೇನೆ. ಎಲ್ಲದಕ್ಕೂ ನಾವೇ ಹೊಡೆದಾಡಬೇಕು; ಎಲ್ಲವನ್ನೂ ನಾವೇ ಕ್ರಿಯೇಟ್ ಮಾಡಿಕೊಳ್ಳಬೇಕು – ಇದು ಇಂದಿನ ಸ್ಥಿತಿ' ಎನ್ನುವ ಸುಮನ್ ಅವರ ಮಾತಿನಲ್ಲಿ, ಚಿತ್ರರಂಗದಲ್ಲಿ ಪ್ರಯೋಗಗಳಿಗೆ ಬೆಲೆಯಿಲ್ಲ ಎನ್ನುವ ವಿಷಾದ ಇಣುಕುತ್ತದೆ.

ಅಂದಹಾಗೆ, ಕನ್ನಡದಲ್ಲಿ ನಟಿಯರಿಲ್ಲ ಎನ್ನುವವರು ಸುಕೃತಾ ವಾಗ್ಲೆ ಅವರನ್ನು ಗಮನಿಸಬೇಕು. 'ಕಿರಗೂರಿನ ಗಯ್ಯಾಳಿಗಳು' ಚಿತ್ರದ ಶೂಟಿಂಗ್ ಸಂದರ್ಭದಲ್ಲಿ ಆಕೆ ಮೂರು ವಾರಗಳ ಕಾಲ ತಲೆಗೆ ಸ್ನಾನ ಮಾಡಿರಲಿಲ್ಲವಂತೆ. 'ನನ್ನ ತಲೆಗೂದಲು ತುಂಬಾ ಸೂಕ್ಷ್ಮವಾದುದರಿಂದ ತಲೆಸ್ನಾನ ಮಾಡಿದರೆ ಪಾತ್ರದ ಸ್ವರೂಪಕ್ಕೆ ಧಕ್ಕೆಯಾಗಬಹುದು' ಎನ್ನುವ ಆತಂಕ ಆಕೆಯದಾಗಿತ್ತು. ಗಗನಸಖಿ ಆಗಿದ್ದ ಹುಡುಗಿಯೊಬ್ಬಳು ತನ್ನ ಪಾತ್ರಕ್ಕಾಗಿ ಈ ರೀತಿ ಯೋಚಿಸುತ್ತಾಳೆಂದರೆ, ಇದಕ್ಕೂ ಮಿಗಿಲಾದ ಬದ್ಧತೆಯನ್ನು ಇನ್ನೇನು ನಿರೀಕ್ಷಿಸುವುದು. ಚಿತ್ರೀಕರಣದ ಸಂದರ್ಭದಲ್ಲಿ ಸುಕೃತಾಳನ್ನು 'ಹಳ್ಳಿ ಹುಡುಗಿ' ಎಂದೇ ಅಲ್ಲಿನ ಜನ ತಿಳಿದುಕೊಂಡಿದ್ದುದನ್ನು ಸುಮನ್ ನೆನಪಿಸಿಕೊಳ್ಳುತ್ತಾರೆ.

'ನಟಿಯರಿಲ್ಲ ಎನ್ನುವುದರ ಬದಲು, ನಟರಿಲ್ಲ ಎನ್ನುವುದು ಹೆಚ್ಚು ಸರಿ. ಯಾವುದೇ ಪಾತ್ರಕ್ಕೂ ನ್ಯಾಯ ಸಲ್ಲಿಸುವ ಸಾಮರ್ಥ್ಯದ ಕಲಾವಿದೆಯರು ನಮ್ಮಲ್ಲಿದ್ದಾರೆ. ಆದರೆ, ಇಂಥ ಸಾಮರ್ಥ್ಯದ ನಟರು ಎಷ್ಟು ಮಂದಿಯಿದ್ದಾರೆ?' ಎಂದು ತಮ್ಮ ನಟಿಯೊಬ್ಬರು ಪ್ರಶ್ನಿಸುತ್ತಾರೆ. 'ವಿನಾಕಾರಣ ವಿವಾದ ಸೃಷ್ಟಿಸುತ್ತಾರೆ' ಎನ್ನುವ ಕಾರಣದಿಂದಾಗಿ ಅನಾಮಿಕಳಾಗಿಯೇ ಉಳಿಯಬಯಸುವ ಅವರು – 'ನಾಯಕನಟರೆಲ್ಲ ಪೊಳ್ಳು ಇಮೇಜ್‌ಗಳ ಪೋಷಣೆಯಲ್ಲಿಯೇ ಮುಳುಗಿರುತ್ತಾರೆ. ಆದರೆ, ತಮ್ಮ ವರ್ಚಸ್ಸೊಂದನ್ನೇ ನೆಚ್ಚಿಕೊಂಡು ಚಿತ್ರವೊಂದನ್ನು ಗೆಲ್ಲಿಸುವ ಸಾಮರ್ಥ್ಯ ನಮ್ಮ ಯಾವ ನಟರಿಗಾದರೂ ಇದೆಯೇ' ಎನ್ನುವುದು ಅವರ ಪ್ರಶ್ನೆ. 'ನಟಿಯರಿಲ್ಲ' ಎನ್ನುವ ನಟ ಚಿತ್ರರಂಗದಿಂದ ಹೆಚ್ಚೂಕಡಿಮೆ ನಿವೃತ್ತರಾಗಿದ್ದಾರೆ. ಮತ್ತೊಬ್ಬ ನಿರ್ದೇಶನ ಕೈಬಿಟ್ಟು ವಾಣಿಜ್ಯಾತ್ಮಕ ಕೆಲಸಗಳಲ್ಲಿ ತೊಡಗಿಕೊಂಡಾಗಿದೆ. ಇಂಥವರಿಗೆ ಪ್ರತಿಭಾವಂತ ನಟಿಯರು ಕಾಣುವುದಾದರು ಹೇಗೆ ಎನ್ನುವುದು ಅವರ ಮತ್ತೊಂದು ಪ್ರಶ್ನೆ.



## ಕಿರುತೆರೆ ಎನ್ನುವ ಮೆಟ್ಟಿಲು

ಕನ್ನಡದ ಹುಡುಗಿಯರು ದೊಡ್ಡ ಸಂಖ್ಯೆಯಲ್ಲಿ ಚಿತ್ರರಂಗಕ್ಕೆ ಬರಲು ಕಾರಣವೇನಾದರೂ



ರಾಧಿಕಾ ಚೇತನ್